# Library & Information Centre

## GIT NEWS

**Loka Darshan 19-10-2016**

# ಜಿಐಟಿ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದ ಪ್ರಶಸ್ತಿ



ಬೆಳಗಾವಿ : ನಗರದ ಕೆಎಲ್ಎಸ್ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದ ಮಾಹಿತಿ ಮತ್ತು ವಿಜ್ಞಾನ ಅಭಿಯಾಂತ್ರಿಕ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಕಾರ್ತಿಕ ಸವಣೂರ ಮತ್ತು ಪ್ರಜಾ ಕುಲಕರ್ಣಿ ಅವರು "ಎಸಿಇ" ಮತ್ತು "ಐಇಇಇ" ಸಂಸ್ಥೆಗಳು ಬೆಂಗಳೂರಿನ ಶ್ರೀ ವೆಂಕಟೇಶ್ವರ ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಎಸ್ಎಸ್ 12 ರಾಷ್ಟ್ರಮಟ್ಟದ ಪ್ರಾಜೆಕ್ಟ್ ಪ್ರದರ್ಶನದಲ್ಲಿ ತಮ್ಮ "ಸ್ಮಾರ್ಟ್ ಫಾರ್ಮ್ಆಟೋಮೇಷನ್" ಎಂಬ ಪ್ರಾಜೆಕ್ಟ್‌ಗೆ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ.

ಮತ್ತು ಇದು ಕೋಯಿಂಬತ್ತೂರಿನ ಕುಮಾರ ಗುರುತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಅಂತರಾಷ್ಟ್ರೀಯ ಪ್ರಾಜೆಕ್ಟ್ ಪ್ರದರ್ಶನದಲ್ಲಿ ಪ್ರದರ್ಶನಕ್ಕೆ ಆಯ್ಕೆ ಆಗಿ ಪ್ರದರ್ಶನಗೊಂಡಿತು. ಇದನ್ನು ಪ್ರೊ. ಎಸ್.ಬಿ.ದೇಶಪಾಂಡೆಅವರ ಮಾರ್ಗದರ್ಶನದಲ್ಲಿ ಮಾಡಲಾಗಿತ್ತು. ವಿದ್ಯಾರ್ಥಿಗಳ ಈ ಸಾಧನೆಗೆ ವಿಭಾಗದ ಪ್ರೊ. ಕಿರಣ್ ತಂಗೋಡ್, ಪ್ರಾಂಶುಪಾಲರಾದ ಡಾ. ಆನಂದ ದೇಶಪಾಂಡೆ ಮತ್ತು ಸಂಸ್ಥೆಯ ಆಡಳಿತ ಮಂಡಳಿ ಅಭಿನಂದಿಸಿದ್ದಾರೆ.